# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೊಉ/ಪಿಆರ್/121/2020-21

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಬೊಮ್ಮನಹಳ್ಳಿ ಉಪವಿಭಾಗ
ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಳೇಕಹಳ್ಳಿ
ಬೆಂಗಳೂರು-560076, ದಿನಾಂಕ: 15/01/2021

## 188 ಬಿಳೇಕಹಳ್ಳಿ ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ದಿನಾಂಕ:- 15/01/2021 ಬೆಳಿಗ್ಗೆ 10:30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ನಡವಳಿಗಳು.

**ವಾರ್ಡ್ ಸಮಿತಿಯ ಹಾಜರಾದ ಸದಸ್ಯರು:-**

1. ಶ್ರೀ ಅಂಜಿನಪ್ಪ ಸಿ.ಟಿ - ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಚೇತನ್ ಕೆ.ಎಂ - ಕಾರ್ಯದರ್ಶಿಗಳು ಹಾಗೂ ಸಹಯಕ ಅಭಿಯಂತರರು ವಾರ್ಡ್-188
3. ಶ್ರೀ ಸುರೇಶ್ ಪ್ರಕಾಶ್ - ರಂಕಾ ಕಾಲೋನಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.
4. ಶ್ರೀ ಹೆಚ್.ಎಂ. ಶೆಟ್ಟಿ - ವಿಜಯಾ ಬ್ಯಾಂಕ್ ಎನ್‌ಕ್ಲೇವ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.
5. ಶ್ರೀ ರಮೇಶ್ ಶೆಟ್ಟಿ - ವಿಜಯಾ ಬ್ಯಾಂಕ್ ಎನ್‌ಕ್ಲೇವ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.
6. ಶ್ರೀ ಶೃತಿ ರಾವ್ - ಸಾರ್ವಭೌಮ ನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು:-**

1. ಡಾ. ಕೃಷ್ಣಪ್ಪ - ಪಿ.ಎಚ್.ಸಿ ಕೆ.ಸಿ ಹಳ್ಳಿ.
2. ಶ್ರೀ ನಾರಯಣ ಸ್ವಾಮಿ ಹೆಚ್ - ಕಿರಿಯ ಅಭಿಯಂತರರು (BESCOM).
3. ಶ್ರೀ ರಮೇಶ್ - ಕಂದಾಯ ಪರಿವೀಕ್ಷಕರು.
4. ಶ್ರೀ ಜಯಪ್ರಕಾಶ್ ಬಿ.ಕೆ - ಸಹಾಯಕ ಅಭಿಯಂತರರು (BWSSB).
5. ಶ್ರೀ ಸತೀಶ್ ಕುಮಾರ್ - ಸಹಾಯಕ ಅಭಿಯಂತರರು (BWSSB).

ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿ ವಾರ್ಡ್-188 ಬಿಳೇಕಹಳ್ಳಿ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸುವುದಾಗಿ ತಿಳಿಸಿದರು.

- ಬೃಹತ್ ನೀರುಗಾಲುವೆ ಬಗ್ಗೆ

ಕಳೆದ ವಾರ್ಡ್ ಸಮಿತಿಯ ಸಭೆಯಲ್ಲಿ ವಿಜಯಾ ಬ್ಯಾಂಕ್ ಮುಖ್ಯರಸ್ತೆಯಿಂದ ಭೂದೇವಿ ದೇವಸ್ಥಾನದ ರಸ್ತೆಯ ವರೆಗೆ ರಸ್ತೆಯ ಬದಿಯ ಮೋರಿಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಮಳೆ ಬಂದ ಸಮಯದಲ್ಲಿ ರಸ್ತೆಯ ಮೇಲೆ ನೀರು ತುಂಬಿ ಮನೆಯ ಒಳಗೆ ನುಗ್ಗುತ್ತಿರುವುದಾಗಿ ವಾರ್ಡ್ ಸದಸ್ಯರುಗಳು ಸಭೆಯಲ್ಲಿ ತಿಳಿಸಲಾಗಿರುತ್ತದೆ. ಸದರಿ ಕಾಮಗಾರಿಯು ಪ್ರಾರಂಭಗೊಂಡಿದ್ದು ಪ್ರಗತಿಯಲ್ಲಿರುವ ಬಗ್ಗೆ ವಾರ್ಡ್ ಕಾರ್ಯದರ್ಶಿಗಳು ತಿಳಿಸಿದರು.

ಮುಂದುವರೆದು, ಸದರಿ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ಬೃಹತ್ ಕಾಲುವೆಯ ನೀರು ವಿಜಯಾ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಒಳಗೆ ನುಗ್ಗುತ್ತಿರುವುದಾಗಿ ವಾರ್ಡ್ ಸದಸ್ಯರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಬೃಹತ್ ನೀರುಗಾಲುವೆಯ ಸಹಾಯಕ ಅಭಿಯಂತರರಾದ ವಿಕ್ರಾಂತ್ ಕುಮಾರ್ ರವರು ತುರ್ತಾಗಿ ಕ್ರಮಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- ಕಸ ಸಮಸ್ಯೆ ಮತ್ತು ನಿರ್ವಹಣೆ ಬಗ್ಗೆ

ಕಳೆದ ವಾರ್ಡ್ ಸಮಿತಿಯ ಸಭೆಯಲ್ಲಿ ರಂಕಾ ಕಾಲೋನಿಯ ಮುಖ್ಯರಸ್ತೆಯಲ್ಲಿ ಬಿ.ಟಿ.ಎಂ ಬಡಾವಣೆ, ಬಿಳೇಕಹಳ್ಳಿ ವಾರ್ಡ್‌ಗೆ ಹೊಂದಿಕೊಂಡಿರುವ ಬನಶಂಕರಿ ವಿಧಾನಸಭಾ ಕ್ಷೇತ್ರ ಕೆಲವು ಬಡಾವಣೆಯ ನಿವಾಸಿಗಳು ಮನೆಯ ಕಸವನ್ನು ರಸ್ತೆಯ ಬಧಿ ಹಾಕುತ್ತಿರುವುದಾಗಿ ವಾರ್ಡಿನ ಸದಸ್ಯರು ಶ್ರೀ ಸುರೇಶ್ ಪ್ರಕಾಶ್ ರವರು ಸಭೆಯಲ್ಲಿ ತಿಳಿಸಲಾಗಿರುತ್ತದೆ. ಆದರೆ ಸದರಿ ವಿಷಯಗಳ ಬಗ್ಗೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿರದ ಕಾರಣ ಸಭೆಗೆ ಗೈರಾದ ಶ್ರೀ ಪ್ರಕಾಶ್, ಅರೋಗ್ಯ ಪರಿವೀಕ್ಷಕರಿಗೆ ಪತ್ರ ಬರೆದು ಸದರಿ ವಷಯದ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳುಲು ತಿಳಿಸುವಂತೆ ಹಾಗೂ ವಾರ್ಡ್ ಸದಸ್ಯರುಗಳಾದ ಶ್ರೀಮತಿ ಶೃತಿ ರಾವ್ ರವರು ಸಾರ್ವಭೌಮನಗರದ, 1ನೇ ಮುಖ್ಯರಸ್ತೆಯಲ್ಲಿ ಸಾರ್ವಜನಿಕರು ಮೂರ್ತವಿರ್ಸಜನೆ ಮಾಡುತ್ತಿರುವ ಬಗ್ಗೆ ತಿಳಿಸಿರುವ ಅಂಶಗಳಿಗೆ ಕ್ರಮ ಕೈಗೊಳ್ಳುವಂತೆ ಅರೋಗ್ಯ ಪರಿವೀಕ್ಷಕರಿಗೆ ನಿರ್ದೇಶನ ನೀಡುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

Scanned with CamScanner

- **ಕೋವಿಡ್–19 ಬಗ್ಗೆ.**

ವಾರ್ಡ್ ಸಂಖ್ಯೆ–188 ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಒಟ್ಟಾರೆ 1201 ಜನರಿಗೆ ಕೋವಿಡ್ ದೃಢೀಕರಣವಾಗಿದ್ದು ಪ್ರಸ್ತುತ 25 ಜನರಿಗೆ ಕೋವಿಡ್ ಕಂಡುಬಂದಿದದು ಇಲ್ಲಿಯವರೆಗೂ ಕೋವಿಡ್‌ನಿಂದ 13 ಜನರು ಸಾವನ್ನಪ್ಪಿದ್ದು ಈ ಬಗ್ಗೆ ಸಾರ್ವಜನಿಕರಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮತ್ತು ಮಾಸ್ಕ್ ಧರಿಸುವ ಬಗ್ಗೆ ಅರಿವು ಮೂಡಿಸಲು ಕೋವಿಡ್ ವಾರಿಯರ್ಸ್‌ಗೆ ಕ್ರಮವಹಿಸುವ ಬಗ್ಗೆ ಸಮಿತಿಯಲ್ಲಿ ತಿಳಿಯಪಡಿಸಲಾಯಿತು.

- **ಬೀದಿ ದೀಪ ನಿರ್ವಹಣೆ ಬಗ್ಗೆ.**

ರಂಕಾ ಕಲೋನಿಯ ಮುಖ್ಯರಸ್ತೆಯಲ್ಲಿರುವ ಬೀಧಿದೀಪ ಕಂಬಗಳಿಗೆ ಅನಧಿಕೃತವಾಗಿ ಓ.ಎಫ್.ಸಿ ಕೇಬಲ್ ಹಗೂ ಇತ್ಯಾದಿ ಕೇಬಲ್‌ಗಳನ್ನು ತೆರೆಯುವ ಸಂಬಂಧ ಸಭೆಯಲ್ಲಿ ವಾರ್ಡಿನ ಸದಸ್ಯರು ಶ್ರೀ ಸುರೇಶ್ ಪ್ರಕಾಶ್ ರವರು ತಿಳಿಸಿದರು.

ವಾರ್ಡ್ ಸದಸ್ಯರಾದ ಶ್ರೀಮತಿ ಶೃತಿ ರಾವ್ ರವರು ಸಾರ್ವಭೌಮನಗರದ, 1ನೇ ಮುಖ್ಯರಸ್ತೆಯಲ್ಲಿ ಬರುವ 1ನೇ ಹಾಗೂ 4ನೇ ಅಡ್ಡರಸ್ತೆ ಹಾಗೂ 2ನೇ ಮುಖ್ಯರಸ್ತೆಯಲ್ಲಿ ಬರುವ 4ನೇ ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳು ದರಸ್ಥಿಗೊಂಡು ಕಾರ್ಯನಿರ್ವಹಿಸದೆ ಇರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಈ ವಿಷಯದ ಸಂಬಂಧ ನೋಡಲ್ ಅಧಿಕಾರಿಯವರು ಬಿ.ಬಿ.ಎಂ.ಪಿ ವಿಧ್ಯುತ್ ವಿಭಾಗದ ಅಧಿಕಾರಿಗಳು ಮತ್ತೊಮ್ಮೆ ಗೈರಾದ ಕಾರಣ ಸದರಿಯವರಿಗೆ ದೂರವಾಣಿ ಮೂಲಕ ಸಂರ್ಪಕಿಸಿ ಈ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸಿರುತ್ತಾರೆ.

ಮುಂದುವರೆದು ರಂಕಾ ಕಲೋನಿಯ ಮುಖ್ಯರಸ್ತೆಯಲ್ಲಿರುವ ಬೀಧಿದೀಪ ಕಂಬಗಳಿಗೆ ಅನಧಿಕೃತವಾಗಿ ಓ.ಎಫ್.ಸಿ ಕೇಬಲ್ ಹಗೂ ಇತ್ಯಾದಿ ಕೇಬಲ್‌ಗಳನ್ನು ತೆರವುಗೊಳಿಸುವ ಸಭೆಯಲ್ಲಿ ಸರ್ವಾನುಮತದಿಂದ ತಿರ್ಮಾನಿಸಲಾಗಿದ್ದು, ತೆರವುಗೊಳಿಸುವ ಸಂಬಂಧ ಬಿ.ಬಿ.ಎಂ.ಪಿ ವಿಧ್ಯುತ್ ವಿಭಾಗಕ್ಕೆ ಪತ್ರ ಬರೆಯಲು ನೋಡಲ್ ಅಧಿಕಾರಿಗಳು ವಾರ್ಡ್ ಕಾರ್ಯದರ್ಶಿಗಳಿಗೆ ಸೂಚಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಮಸ್ಯೆಗಳ ಬಗ್ಗೆ**

ವಾರ್ಡ್ ಸದಸ್ಯರಾದ ಶ್ರೀಮತಿ ಶೃತಿ ರಾವ್ ರವರು ಸಾರ್ವಭೌಮನಗರದ, 1ನೇ ಮುಖ್ಯರಸ್ತೆಯಲ್ಲಿ ಬರುವ 1ನೇ ಹಾಗೂ 2ನೇ ಅಡ್ಡರಸ್ತೆ ಹಾಗೂ 2ನೇ ಮುಖ್ಯರಸ್ತೆಯಲ್ಲಿ ಬರುವ 3ನೇ ಅಡ್ಡರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ಒಳಚರಂಡಿ ನೀರು ರಸ್ತೆ ಮೇಲೆ ಹುಕ್ಕಿ ಹರಿಯುತ್ತಿರುವದಾಗಿ ಹಾಗೂ ರಂಕಾ ಕಾಲೋನಿ, ವಿಜಯಾ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಸಬ್‌ಮೈನ್ ಪೈಪ್‌ನಲ್ಲಿ ಹೂಳು ತುಂಬಿಕೊಂಡಿರುವುದರಿಂದ ಸದರಿ ಸ್ಥಳಗಳಲ್ಲಿ ಒಳಚರಂಡಿ ನೀರು ನುಗ್ಗುತ್ತಿರುವುದಾಗಿ ಸಭೆಯಲ್ಲಿ ವಾರ್ಡ್ ಸದಸ್ಯರುಗಳು ತಿಳಿಸಿದರು.

ಸಾರ್ವಭೌಮನೆಗರದ, 1ನೇ ಮುಖ್ಯರಸ್ತೆಯಲ್ಲಿ ಬರುವ 1ನೇ ಹಾಗೂ 2ನೇ ಅಡ್ಡರಸ್ತೆ ಹಾಗೂ 2ನೇ ಮುಖ್ಯರಸ್ತೆಯಲ್ಲಿ ಬರುವ 3ನೇ ಅಡ್ಡರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ಒಳಚರಂಡಿ ನೀರು ರಸ್ತೆ ಮೇಲೆ ಹುಕ್ಕಿ ಹರಿಯುತ್ತಿರುವುದರ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಜಯ ಪ್ರಕಾಶ್ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪ್ರತಿಕ್ರಯಿಸಿ ಸದರಿ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ರಂಕಾ ಕಾಲೋನಿ, ವಿಜಯಾ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಸಬ್‌ಮೈನ್ ಪೈಪ್‌ನಲ್ಲಿ ಹೂಳು ತುಂಬಿಕೊಂಡಿರುವುದರಿಂದ ಸದರಿ ಸ್ಥಳಗಳಲ್ಲಿ ಒಳಚರಂಡಿ ನೀರು ನುಗ್ಗುತ್ತಿರುವುದರ ಬಗ್ಗೆ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಾದ ಶ್ರೀ ಸತೀಶ್ ಕುಮಾರ್ ರವರು ಪ್ರತಿಕ್ರಯಿಸಿ ಸಬ್‌ಮೈನ್‌ನಲ್ಲಿ ಹೂಳು ತೆಗೆಯುವ ಕಾಮಗಾರಿಯು ಪ್ರಗತಿಯಲ್ಲಿದ್ದು 3 ತಿಂಗಳುಗಳಲ್ಲಿ ಪೂರ್ಣಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- **ಪಾದಚಾರಿ ಒತ್ತುವರಿ ಬಗ್ಗೆ.**

ರಂಕಾ ಕಲೋನಿಯ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಹಾಲಿನ ಭೂತ್‌ನ್ನು ಅಳವಡಿಸಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುವುದಾಗಿ ಸಭೆಯಲ್ಲಿ ರಂಕಾ ಕಾಲೋನಿಯ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರುಗಳು ತಿಳಿಸಿದರು ಹಾಗೂ ಅಯ್ಯಪ್ಪ ದೇವಸ್ಥಾನ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಸದಸ್ಯರುಗಳು ತಿಳಿಸಿದರು ಈ ವಿಷಯದ ಸಂಬಂಧ ನೋಡಲ್ ಅಧಿಕಾರಿಯವರು ಬಿ.ಬಿ.ಎಂ.ಪಿಯ ವಾರ್ಡ್ ಸಹಾಯಕ ಅಭಿಯಂತರರಿಗೆ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳಲು ತಿಳಿಸಿದರು.

- **ಅರಣ್ಯ ಇಲಾಖೆಯ ವಿಷಯಗಳ ಬಗ್ಗೆ.**

ವಿಜಯ ಎನ್‌ಕ್ಲೇವ್, ವಿಜಯಾ ಬ್ಯಾಂಕ್ ಕಾಲೋನಿಯಲ್ಲಿ ಮರದ ಕೊಂಬೆಯು ವಿಧ್ಯುತ್ ಕಂಬಕ್ಕೆ ಅಳವಡಿಸಿದ ಟ್ರಾನ್ಸ್‌ಫಾರ್‌ಮರ್ ಮೇಲೆ ಬೀಳುವ ಸಂಬಂಧವಿದ್ದು ಸಂಬಂಧಪಟ್ಟ ಅರಣ್ಯ ಅಧಿಕಾರಿಗಳಿಗೆ ಮರದ ಕೊಂಬೆಯನ್ನು ತೆರವುಗೊಳಿಸಲು ತಿಳಿಸಿದರು. ಈ ವಿಷಯದ ಸಂಬಂಧ ನೋಡಲ್ ಅಧಿಕಾರಿಯವರು ಬಿ.ಬಿ.ಎಂ.ಪಿ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತೊಮ್ಮೆ ಗೈರಾದ ಕಾರಣ ಸದರಿಯವರಿಗೆ ದೂರವಾಣಿ ಮೂಲಕ ಸಂರ್ಪಕಿಸಿ ಈ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು. ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

15/01/21 | 15/01/2021
--- | ---
ಕಾರ್ಯದರ್ಶಿಗಳು<br>ಹಾಗೂ ಸಹಾಯಕ ಅಭಿಯಂತರರು | ಅಧ್ಯಕ್ಷರು<br>ಹಾಗೂ ನೋಡಲ್ ಅಧಿಕಾರಿಗಳು

*ಪ್ರತಿಯನ್ನು:*

1. *ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.*
2. *ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.*
3. *ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.*
4. *ಕಛೇರಿ ಪ್ರತಿ.*

Scanned with CamScanner




Scanned with CamScanner




Scanned with CamScanner